ಕ್ರ. ಸಂ.	ಗಣಿ ಗುತ್ತಿಗೆದಾರರ ಹೆಸರು	ಎಂ.ಎಲ್	ಸ್ಥಳ ಸಂಖ್ಯೆ	ವಿಸ್ತೀರ್ಣ	ಖನಿಜದ	ರಾಜಧನ ರೂ.ಗಳಲ್ಲಿ
					ಹೆಕ್ಟೇರ್‌ಗಳಲಿರ	
3.	ಮೈಸೂರು ಮಿನರಲ್ಸ್ ಲಿಮಿಟೆಡ್	1743	ಕರಕೊಡ್ಲು	20.23	ಮ್ಯಾಂಗನೀಸ್	8,900
4.	ಮೈಸೂರು ಮಿನರಲ್ಸ್ ಲಿಮಿಟೆಡ್	1550	ದೇವನಗಿರಿ	6.45	ಚೈನಾಕ್ಲೇ	5,59,050
5.	ಮೈಸೂರು ಮಿನರಲ್ಸ್ ಲಿಮಿಟೆಡ್	732	ನಾಗದೇವಹಳ್ಳಿ	27.52	ಚೈನಾಕ್ಲೇ	5,504
6.	ಎನ್. ಪಿ. ಭೋಜರಾಜ್	2259	ಹೊನ್ನೆಬಾಗಿ	1.50	ಹಸಿರು ಬೆಣಚು ಕಲ್ಲು	1,050
7.	ಹೆಚ್. ಜಗದೀಶ್	1964	ಕೆಂಗಟ್ಟೆ	16.91	ಬಿಳಿ ಬೆಣಚು ಕಲ್ಲು	17,040

ರಾಜ್ಯದಲ್ಲಿ ಪಶು ಚಿಕಿತ್ಸೆಗೆ ಶುಲ್ಕ ವಿನಾಯಿತಿ ನೀಡುವ ಬಗ್ಗೆ

4143 (4781) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಆಸ್ಪತ್ರೆಗಳಲ್ಲಿ ಸೇವಾ ಶುಲ್ಕ ವಿಧಿಸಲು ಸರ್ಕಾರ ತೀರ್ಮಾನಿಸಿದೆಯೇ: ಹಾಗಿದ್ದರೆ, ಚಿಕಿತ್ಸೆಗೆ ನಿಗಧಿಪಡಿಸಿರುವ ದರಗಳೇನು:

ಆ) ಈ ಸೇವಾ ಶುಲ್ಕ ನಗರಪಾಲಿಕೆ ಮತ್ತು ಪುರಸಭೆ ವ್ಯಾಪ್ತಿಗೆ ಮಾತ್ರ ಮಿತಿಗೊಳಿಸಲಾಗುವುದೇ:

ಇ) ಪುರಸಭೆ ಸಮೀಪವಿರುವ ಗ್ರಾಮಾಂತರ ಪ್ರದೇಶದ ರೈತರಿಗೆ ಆಸ್ಪತ್ರೆ ಸೌಲಭ್ಯವಿಲ್ಲದಿದ್ದಲ್ಲಿ ಈ ಶುಲ್ಕ ಭರಿಸುವುದು ಅಸಾಧ್ಯ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಪುರಸಭೆ ವ್ಯಾಪ್ತಿ ಆಸ್ಪತ್ರೆಗಳಲ್ಲಿ ರೈತರಿಗೆ ಶುಲ್ಕವಿನಾಯಿತಿ ನೀಡಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ನಗರ ಪ್ರದೇಶಗಳಲ್ಲಿ ವಿಧಿಸಲಾಗಿದ್ದ ಸೇವಾ ಶುಲ್ಕವನ್ನು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21.7.2003ರಲ್ಲಿ ಹಿಂದಕ್ಕೆ ಪಡೆಯಲಾಗಿದೆ.

ಆ) ಮೇಲ್ಕಂಡಂತೆ ಹಿಂಪಡೆಯಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ಕಾಗದ ಕಾರ್ಖಾನೆಯ ಅರಣ್ಯ ವಿಭಾಗದಲ್ಲಿ ಖಾಯಂಗೊಳ್ಳದಿರುವ ನೌಕರರ ಬಗ್ಗೆ

4144 (4782) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಕಾಗದ ಕಾರ್ಖಾನೆಯ (ಎಂಪಿಎಂ) ಅರಣ್ಯ ವಿಭಾಗದಲ್ಲಿ ಖಾಚರ್, ಡ್ರೈವರ್ ಇತ್ಯಾದಿ ಹುದ್ದೆಗಳಲ್ಲಿ ಖಾಯಂ ಗೊಳ್ಳದೆ ನೌಕರರ ಸಂಖ್ಯೆ ಎಷ್ಟು:

ಆ) ಯಾವ ಸಾಲಿನಿಂದ ಎಷ್ಟು ಜನ ಈ ನೌಕರರು ಕೆಲಸ ಮಾಡುತ್ತಿದ್ದಾರೆ: